ಸಿ.ಸಿ .ನಂ. 201/2018 ಪಿಡಬ್ಲೂಃ 1

ದಿನಾಂಕಃ 2-8-2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಜೆ ಎನ್ ವಕೀಲರಿಂದಃ**

4. ನಾನು ಕಳೆದ 5 ವರ್ಷ 10 ತಿಂಗಳಿನಿಂದ ಫಿರ್ಯಾದುದಾರ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ. ಈ ಕೇಸಿನ ವ್ಯವಹಾರ ಆಗಿದೆ ಎಂದು ಹೇಳಿದ ಸಂದರ್ಭದಲ್ಲಿ ನಾನು ಫಿರ್ಯಾದುದಾರ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ . ಈ ಕೇಸಿನಲ್ಲಿ ಹೇಳಿರುವ ವಾಹನ ಹಳೆಯ ವಾಹನವಾಗಿತ್ತು . ಸದರಿ ವಾಹನದ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲ ತೆಗೆದುಕೊಳ್ಳುವ ಪೂರ್ವದಲ್ಲಿ ಸದರಿ ವಾಹನ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎಂದರೆ ಸರಿ . ಈ ಕೇಸಿನ ಸಾಲದ ಮೊದಲು ಸದರಿ ವಾಹನಕ್ಕೆ ನಮ್ಮ ಸಂಸ್ಥೆಯಲ್ಲಿ ಬೇರೆ ಸಾಲ ಇರಲಿಲ್ಲ . ಸದರಿ ವಾಹನಕ್ಕೆ ಸಾಲ ಕೊಡಬೇಕಾದರೆ ಸದರಿ ವಾಹನದ ದಾಖಲೆಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ. ಸದರಿ ವಾಹನದ ಮೂಲ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ . ಸದರಿ ವಾಹನವನ್ನು ಫಿರ್ಯಾದುದಾರ ಸಂಸ್ಥೆಯವರು ಮಾರಾಟ ಮಾಡಿರುತ್ತಾರೆ . ಸದರಿ ವಾಹನವನ್ನು ಮಾರಾಟ ಮಾಡುವ ಪೂರ್ವದಲ್ಲಿ ಆರೋಪಿಗೆ ನೋಟಿಸನ್ನು ನೀಡಿರುತ್ತೇವೆ . ಸದರಿ ವಾಹನವನ್ನು 2013 ನೇ ಇಸವಿಯ ಸಪ್ಟೆಂಬರ ತಿಂಗಳಿನಲ್ಲಿ ಮಾರಾಟ ಮಾಡಿರುತ್ತೇವೆ . ಸದರಿ ವಾಹನವನ್ನು ಮಾರಾಟ ಮಾಡಿದ ದಿವಸ ಎಷ್ಟು ಸಾಲದ ಹಣ ಬಾಕಿ ಇತ್ತು ಎಂದು ನನಗೆ ಈಗ ನಿಖರವಾಗಿ ಹೇಳಲು ಆಗುವುದಿಲ್ಲ . ಸದರಿ ವಾಹನವನ್ನು ಯಾರಿಗೆ ಮಾರಾಟ ಮಾಡಿರುತ್ತೇವೆ ಎಂದು ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಿಲ್ಲ ಎಂದರೆ ಸರಿ . ಸದರಿ ವಾಹನವನ್ನು ಮಾರಾಟ ಮಾಡುವ ಪೂರ್ವದಲ್ಲಿ ಆ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಕಟಣೆಯನ್ನು ಹೊರಡಿಸಿಲ್ಲ . ಸದರಿ ವಾಹನವನ್ನು ಮಾರಾಟ ಮಾಡಿ ಬಂದ ಹಣವನ್ನು ಸ್ಟೇಟ್ ಮೆಂಟ್ ಆಫ್ ಅಕೌಂಟ್

ನಲ್ಲಿ ತೋರಿಸಲಾಗಿದೆ . ಸದರಿ ವಾಹನವನ್ನು ಒಟ್ಟೂ 45 ಸಾವಿರ ರೂಪಾಯಿಗೆ ಮಾರಾಟ ಮಾಡಲಾಗಿದೆ. ಸದರಿ ವಾಹನವನ್ನು ಮಾರಾಟ ಮಾಡಿದ ಬಗ್ಗೆ ನಿರ್ವಹಿಸಿರುವ ವಹಿಯನ್ನು ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

5. ಸಾಲವನ್ನು ಕೊಡುವ ಪೂರ್ವದಲ್ಲಿ ಸದರಿ ವಾಹನ ಆರೋಪಿಯ ಹೆಸರಿನಲ್ಲಿ ಇದ್ದಿರಬಹುದು . ಸದರಿ ವಾಹನದ ಮೂಲ ದಾಖಲೆಗಳು ಈಗ ನಮ್ಮ ಹತ್ತಿರ ಇಲ್ಲ. ಸದರಿ ವಾಹನವನ್ನು ನಾವು ಮಾರಾಟ ಮಾಡಿದ ನಂತರ ಅದನ್ನು ಖರೀದಿ ಮಾಡಿದವರು ನಮ್ಮ ಸಂಸ್ಥೆಯಿಂದ ಸದರಿ ವಾಹನದ ಮೇಲೆ ಸಾಲವನ್ನು ಪಡೆದುಕೊಂಡಿಲ್ಲ. ಸದರಿ ವಾಹನವನ್ನು ಮಾರಾಟ ಮಾಡುವ ಪೂರ್ವದಲ್ಲಿ ಅದರ ಮಾರುಕಟ್ಟೆ ಮೌಲ್ಯದ ಬಗ್ಗೆ ಇದ್ದ ದಾಖಲೆಯನ್ನು ಈ ಕೇಸಿನಲ್ಲಿ ನಾವು ಹಾಜರು ಪಡಿಸಿಲ್ಲ . ಸಾಲವನ್ನು ಕೊಡುವ ಸಂದರ್ಭದಲ್ಲಿ ಸದರಿ ವಾಹನದ ಮಾರುಕಟ್ಟೆ ಮೌಲ್ಯದ ಬಗ್ಗೆ ವಾಹನ ತಪಾಸಣಾ ವರದಿಯನ್ನು ಪಡೆದುಕೊಂಡಿರುತ್ತೇವೆ . ಸದರಿ ತಪಾಸಣಾ ವರದಿಯನ್ನು ಈ ಕೇಸಿನಲ್ಲಿ ನಾವು ಹಾಜರು ಪಡಿಸಿಲ್ಲ. ಸದರಿ ವಾಹನದ ಬಗ್ಗೆ ಸಾಲವನ್ನು ಕೊಟ್ಟಿರುತ್ತೇವೆ ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನ ಇತ್ತು ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನ ಆರೋಪಿಯ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಇಂತಹ ವಾಹನ ಆರೋಪಿಯ ಹೆಸರಿನಲ್ಲಿ ಇತ್ತು ಎಂದು ಹಾಗೂ ಆರೋಪಿಯು ನಮ್ಮ ಹತ್ತಿರ ಬಂದು ಸಾಲವನ್ನು ಕೇಳಿರುತ್ತಾರೆ ಎಂದು ಹಾಗೂ ಅವರು ಹೈಪೋಥಿಕೇಶನ್ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

6. ಆರೋಪಿಯು ನಾವು ಹೇಳಿದ ಸಾಲದ ಹಣವನ್ನು ಪಡೆದುಕೊಂಡಿರುತ್ತಾರೆ ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿ . ಸಾಲದ ಹಣ ಆರೋಪಿಗೆ

ಸಂದಾಯವಾಗಿದೆ ಎಂದು ತೋರಿಸಲು ನಾವು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.